ನಡವಳಿಕೆ ಹೇಗಿರುತ್ತೆಂಬುದನ್ನು ತಿಳಿದು, ಅಲ್ಲಿರುವಂಥ ತೊಂದರೆಗಳನ್ನು ತಪ್ಪಿಸುವುದಕ್ಕೆ ಎಲ್ಲಾ ಪ್ರಯತ್ನ ಗಳನ್ನೂ ಮಾಡಲಾಗುತ್ತದೆ.

ಶ್ರೀ ಬಿ. ಸಿ. ನಂಜುಂಡಯ್ಯನವರು.—ಸ್ಯಾನಿಟೆರಿ ಇಂಜಿನಿಯರಿಂಗ್ ಇಲಾಖೆಯವರಿಗೆ ವಹಿಸುವಂಥ ಕೆಲಸವನ್ನು ಪಿ. ಡಬ್ಲ್ಯು. ಡಿ.ಯವರಿಗೆ ವಹಿಸಿರುವುದರಿಂದ ಅವರು ಈಬಗ್ಗೆ ಸಾಕಷ್ಟು ನಿಗಾ ತೆಗೆದುಕೊಳ್ಳುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ? ಮತ್ತು ಈ ಕೆಲಸವನ್ನು ಡೈರೆಕ್ಟರ್ ಆಫ್ ಪಬ್ಲಿಕ್ ಹೆಲ್ತ್ ಅವರಿಗೆ ಕೊಟ್ಟರೆ ಚೆನ್ನಾಗಿ ನಡೆಯುವುದಿಲ್ಲವೇ?

Sri R. CHENNIGARAMIAH.—The question will be examined.

ನಗರಗಳಲ್ಲಿ ನೀರಿನ ಸೌಲಭ್ಯ ಮತ್ತು ಚರಂಡಿ ಗಳ ವ್ಯವಸ್ಥೆ ಈ ಬಾಬುಗಳಿಗೆ ಬಹಳ ಪ್ರಾಮುಖ್ಯ ಸ್ಥಾನವನ್ನು ಕೊಡಲಾಗಿದೆ. ಹೆಚ್ಚು ಚೆಕ್ಕಿಕರ್ ಪರಿಶ್ರಮವುಳ್ಳ ಇಲಾಖೆಗೆ ಮತ್ತು ಈ ಬಾಬಿನಲ್ಲಿಯೇ ಸ್ಪೆಷಲೈಜ್ ಆಗಿ ಬಂದಿರತಕ್ಕವರಿಗೇ ಈ ಕೆಲಸ ಗಳನ್ನು ವಹಿಸುವುದು ಯೋಗ್ಯವಾದುದೆಂದು ಕಂಡು ಬಂದಿದ್ದ ಕಾರಣ ಇವೆಲ್ಲವನ್ನು ಈಗ ಸ್ಯಾನಿಟೆರಿ ಇಂಜಿನಿಯರಿಂಗ್ ಇಲಾಖೆಗೆ ವಹಿಸಲಾಗಿದೆ. ಆದರೆ ಈ ಬಾಬಿನಿಂದ ಕೆಲಸಕ್ಕೆ ನಿಧಾನವಾಗುತ್ತಿದೆಯೆಂಬ ಅಂಶವನ್ನು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಹಾಗೆ ನಿಧಾನವಾಗದಂತೆ ಅದನ್ನು ಸರಿಪಡಿಸಲಾಗುತ್ತೆ, ಮತ್ತು ಈ ಬಾಬುಗಳನ್ನು ಬೇರೆ ಇಲಾಖೆಗೇನಾದರೂ ವಹಿಸಬಹುದೇ ಎಂಬ ಅಂಶವನ್ನೂ ಸಹ ಪರಿಶೀಲನೆ ಮಾಡಿ ತೀರ್ಮಾನ ಮಾಡಲು ಆಲೋಚನೆ ಮಾಡ ಲಾಗುತ್ತೆ.

ಶ್ರೀ ಬಿ. ಸಿ. ನಂಜುಂಡಯ್ಯನವರು.—ಅನೇಕ ಕಡೆ ಹೀಗೆ ಕೊಟ್ಟಿದ್ದಾರೆ. ಹೀಗೆ ತಾವು ಈಗ ಈ ಅಧಿಕಾರ ಗಳನ್ನು ಅವರಿಗೆ ವಹಿಸುವುದರಿಂದ ಹೆಚ್ಚಿನ ಅನುಕೂಲ ಏದೆಯೆಂಬುದನ್ನು ಸರ್ಕಾರದವರು ಆಲೋಚನೆ ಮಾಡುತ್ತೀರಾ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆಲೋ ಚನೆ ಮಾಡುತ್ತೇವೆ.

Maintenance Accounts of Chitaldrug Water Works.

*Q.—29. Sri A. BHEEMAPPA NAIK (Chitaldrug District—General).—Will the Government be pleased to state:—

(*a*) whether they are aware that the annual maintenance of Chitaldrug Water Works has been entrusted to the Sanitary Department;

(*b*) the number of years during which the Department have not furnished the actual expenditure incurred for maintenance?

A. Sri R. CHENNIGARAMIAH (Minister for Local Self-Government).—

(*a*) Yes.

(*b*) It is ascertained that the accounts have not been furnished from 1st February 1950.

ಶ್ರೀ ಎ. ಭೀಮಪ್ಪನಾಯಕರು.—ಪ್ರತಿಯೊಂದು ಮುನಿಸಿಪಾಲಿಟಿಗಳವರೂ ಪ್ರತಿಯೊಂದು ವರ್ಷದ ಆದಾಯ ಮತ್ತು ಖರ್ಚು ಎಷ್ಟೆಷ್ಟಾಗಿರುತ್ತದೆಂಬ ಬಗ್ಗೆ ಪ್ರತಿವರ್ಷದ ಒಂದು Estimate for probable expenditure ನ್ನು ತಮಗೆ ಕಳುಹಿಸಿಕೊಡುತ್ತಿದ್ದಾರೆಯೇ?

*ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕಳುಹಿಸಿ ಕೊಡುತ್ತಿದ್ದಾರೆ.

ಶ್ರೀ ಎ. ಭೀಮಪ್ಪನಾಯಕರು.—ಪ್ರತಿಯೊಂದು ವರ್ಷದಲ್ಲಿಯೂ ಎಷ್ಟು ಹಣ ಖರ್ಚಾಗಿದೆ ಮತ್ತು ಉಳಿದಿರುವುದೆಷ್ಟು ಎಂಬುದನ್ನು ಪ್ರತಿಯೊಂದು ಮುನಿಸಿಪಾಲಿಟಿಗಳ ಬಗ್ಗೆ ಪ್ರತ್ಯೇಕವಾಗಿ ಲೆಕ್ಕ ಕೊಡಲಕ್ಕಾಗುತ್ತದೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ತಾವೇನು ಒಟ್ಟು ಎಲ್ಲಾ ಮುನಿಸಿಪಾಲಿಟಿಗಳ annual expenditure ಕೇಳುತ್ತೀರೋ?

ಶ್ರೀ ಎ. ಭೀಮಪ್ಪನಾಯಕರು.—ನಾನು ಕೇಳುತ್ತಿರುವುದು ಪ್ರತಿವರ್ಷವೂ ಆಗತಕ್ಕದ್ದು. ಈ ವೋರ್ಕ್ ವೆಲ್ ಮ್ಯಾನೇಜ್‌ಮೆಂಟ್ ಅವರ ಹಿಡಿತದಲ್ಲೇ ಇರುವುದರಿಂದ, ಆ ಬಗ್ಗೆ actual expenditure incurred by Sanitary Department for annual maintenance of Chitaldrug Water Works ಎಷ್ಟಾಗಿದೆ ಎಂಬುದನ್ನು ತಿಳಿಸಲಕ್ಕಾಗುತ್ತದೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈಗ ಆ ತಪಶೀಲುಗಳನ್ನು ಎಲ್ಲಾ ಮುನಿಸಿಪಾಲಿಟಿಗಳವರೂ ಕಳುಹಿಸಿಕೊಡುತ್ತಿದ್ದಾರೆ. ಆದರೆ 3-4 ವರ್ಷಗಳ ಹಿಂದಿನ ಕೆಲವು ಲೆಕ್ಕಗಳನ್ನು ಕೆಲವು ಮುನಿಸಿಪಾಲಿಟಿ ಗಳವರು ಕಳುಹಿಸಿರುವುದಿಲ್ಲ. ಉಳಿದ ಅಂಕ ಅಂಶಗ ಳೆಲ್ಲವೂ ನನ್ನಲ್ಲಿವೆ.

ಶ್ರೀ ಎ. ಭೀಮಪ್ಪನಾಯಕರು.—ಎಲ್ಲಾ ಮುನಿಸಿ ಪಾಲಿಟಿಗಳಿಗೂ, ಹೀಗೆ ಲೆಕ್ಕಗಳನ್ನು ಕಳುಹಿಸಬೇಕೆಂದು ತಾವು ಅವರಿಗೆ ತಿಳಿಸಿರಲಲ್ಲವೇ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಪ್ರತಿ ತಿಂಗ ಳಲ್ಲಿಯೂ ಅವರು ಆ ಲೆಕ್ಕಗಳನ್ನೆಲ್ಲಾ ಕಳುಹಿಸುತ್ತಿ ದ್ದಾರೆ. ಆದರೆ ಒಂದೆರಡು ಜಿಲ್ಲೆಗಳ ಲೆಕ್ಕಗಳು ಮಾತ್ರ ಬಂದಿಲ್ಲ. ಈಗ ಹಾಲಿ 22-11-1949ರ ವರೆಗೆ ಮತ್ತು 1950ನೆಯ ಜನವರಿ ಮತ್ತು ಫೆಬ್ರು ವರಿ ತಿಂಗಳ ಅಂಕ ಅಂಶಗಳೆಲ್ಲ ನನ್ನಲ್ಲಿವೆ.

ಶ್ರೀ ಎ. ಭೀಮಪ್ಪನಾಯಕರು.—ನಾನು ಕೇಳುತ್ತಿ ರುವುದು 1943-44-45 ಮತ್ತು 46ನೆಯ ಇಸವಿಯ ಲೆಕ್ಕಗಳು.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅವು ನನ್ನಲ್ಲಿ ಇಲ್ಲ.

ಶ್ರೀ ಎ. ಭೀಮಪ್ಪನಾಯಕರು.—ಹಾಗೆ 1943 ರಿಂದ 1949ರ ತನಕ ಕೆಲವು ಮುನಿಸಿಪಾಲಿಟಿಗಳವರು ತಮ್ಮ ಆದಾಯ ವೆಚ್ಚಗಳನ್ನು ಕಳುಹಿಸದೆ ಇರುವುದ ರಿಂದ ಅವರ ನಿಜವಾದ ಆದಾಯ ವೆಚ್ಚಗಳೇನಿರು ತ್ತೆಂಬ ಬಗ್ಗೆ ಮತ್ತು ಅವರಿಗೆ ಖರ್ಚು ಏಪರೀತ ಹೆಚ್ಚಾಗಿ ಹೋಗಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ನಾನಾ ಗಲೇ ತಿಳಿಸಿರುವಂತೆ 29-3-50ರ ತನಕ ನನ್ನಲ್ಲ ಎಲ್ಲಾ ಅಂಕಿಅಂಶಗಳೂ ಇವೆ. ಹಿಂದೆ ನಾನು ತಿಳಿಸಿರುವ ಉತ್ತರದಲ್ಲೇ ಕೆಲವು ಮುನಿಸಿಪಾಲಿಟಿಗಳವರು ಕ್ರಮ ವಾಗಿ ಕಳುಹಿಸಿಲ್ಲವೆಂಬುದು ವ್ಯಕ್ತಪಟ್ಟಿದೆ. ಅದನ್ನೆಲ್ಲ ಸರಿಪಡಿಸಿ, ರೆಗ್ಯುಲರೈಸ್ ಮಾಡಿ ಕಳುಹಿಸುವಂತೆ ಏರ್ಪಾಡು ಮಾಡಲಾಗುತ್ತದೆ.

Sri A. BHEEMAPPA NAIK.—Will the Hon'ble Minister ask the Department to furnish immediately all the pending accounts up-to-date so that the arrears from my municipality may be paid up to date immediately?

Sri R. CHENNIGARAMIAH.—Yes.

Sri H. M. CHANNABASAPPA (Mysore District—General).— May I know whether it is the estimated cost of maintenance or the actual outlay that has got to be paid by the Local Board to the Sanitary Engineering Department?

Sri R. CHENNIGARAMIAH.—Actual outlay.

Sri H. M. CHANNABASAPPA.—Has it come to the notice of Government that the Sanitary Engineering Department has been stressing for the payment of estimated cost in advance?

ಅಧ್ಯಕ್ಷರು.—ಈಗ ತಾವು ಕೇಳುತ್ತಿರುವುದು ಸಾಮಾನ್ಯ ಪ್ರಶ್ನೆ ಆಗಿರುವಂತೆ ಕಾಣುತ್ತಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಯಾವ ಯಾವ ರೀತಿ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆಂಬುದನ್ನು ತಿಳಿದು ಕೊಳ್ಳುವಕ್ಕಬಗ್ಗೆ ಕೇಳುತ್ತಿದ್ದೇನೆ.

Sri R. CHENNIGARAMIAH.—It is true; but when work is completed, the amount will be adjusted and if there is any balance, it will be refunded.

Sri H. M. CHANNABASAPPA.—Have the Government any instance to show that the Sanitary Department has deducted the actual outlay and paid back the balance?

Sri R. CHENNIGARAMIAH.—As a matter of fact in the Chitaldrug Municipality, the Sanitary Department has got to refund some amount. What exactly they have to refund, is not known; but the question will be taken up and it will be refunded.

Sri H. M. CHANNABASAPPA.—Is not the Sanitary Department required to send outlay statement every month?

Sri R. CHENNIGARAMIAH.—They are not sending outlay statement every month. Outlay statement will be sent once a year, but the actual maintenance charges accounts will be sent once a month.

Sri H. M. CHANNABASAPPA —If they have failed to submit the outlay statement to the Local Board, will the Government take necessary action to see that it is expedited?

Sri R. CHENNIGARAMIAH.—We have been examining the whole thing and we will take necessary action to see that the whole thing is expedited.

Sri M. GOVINDA REDDY (Chitaldrug District-General).—Who is the authority to audit the accounts of the Sanitary Department?

Sri R. CHENNIGARAMIAH.—Audit authorities.

Sri M. GOVINDA REDDY.—Have the accounts of Chitaldrug Water Works been supervised year by year—audited year by year?

Sri R. CHENNIGARAMIAH.—Notice.

Sri M. GOVINDA REDDY.—It was said that before 1950, accounts were not rendered to the municipality. What action have the Government taken in this regard?

Sri R. CHENNIGARAMIAH.—I did not say like that. From the year 1948 accounts are being furnished regularly. I have got the dates and numbers also.

Sri M. GOVINDA REDDY.—Prior to that, accounts were not furnished; is it true?

Sri. R. CHENNIGARAMIAH.—It might be true.

Sri M. GOVINDA REDDY.—Is it not a fact that these accounts must be sent to the concerned municipal authorities year after year?

Sri. R. CHENNIGARAMIAH.—Yes.

Sri M. GOVINDA REDDY.—Now it is found out that before 1950, accounts have not been sent to the municipality. What action has been taken in this matter?

Sri R. CHENNIGARAMIAH.—Not prior to 1950. Prior to 1948 accounts were not being furnished regularly; afterwards, from 1948 accounts are being furnished regularly every month. We have got dates and numbers also.

Sri M. GOVINDA REDDY.—The grants due to the Municipality have not been regulated. What action has been taken in the matter?

Sri R. CHENNIGARAMIAH.—Necessary action has been taken to expedite. But the Municipality is also due to the extent of one lakh and odd to the Sanitary Board.

Mr. SPEAKER.—Question No. 100. The Revenue Minister is not present. We shall take up question No. 118. Sri G. Veerappa.

Preservation of Forests.

* *Q.*—118. Sri G. VEERAPPA (Chitaldrug District—General).—

Will the Government be pleased to state :—

(*a*) whether they are aware that on account of the indiscriminate removal of fuel from the forests in the State for the supply of fuel to Bangalore, there has been a great danger of the considerable forest wealth of the State being depleted ;

(*b*) the steps that are being taken by them towards preservation of the forests ?

A.—Sri. R. CHENNIGARAMIAH (Minister for Local Self-Government).—

(*a*) No.

(*b*) Strict protection and regulated exploitation are the chief means of preservation and raising large-scale fuel plantations in the State. These are kept in view and followed.

ಶ್ರೀ ಜಿ. ವೀರಪ್ಪನವರು — ಈಗ ಏವೇಚನೆಯಿಲ್ಲದೆ ಕಾಡಿನಲ್ಲಿ ಕಟ್ಟಿಗೆಗಾಗಿ ಕಂಟ್ರಾಕ್ಟರುಗಳು ಮರ ಗಳನ್ನು ಕತ್ತರಿಸುತ್ತಿದ್ದಾರಲ್ಲಾ ಅದನ್ನು ತಪ್ಪಿಸುವು ದಕ್ಕಾಗಿ ತಾವು ಪರ್ಮಿಟ್ ಕೊಡುವಾಗ ಇಷ್ಟೇ ಮರಗ ಳನ್ನು ಮತ್ತು ಇಂಥಿಂಥ ಮರಗಳನ್ನು ಮಾತ್ರ ಕತ್ತ ರಿಸಬೇಕೆಂದು ನಿಗದಿಮಾಡಿ ಪರ್ಮಿಟ್ ಕೊಡುತ್ತೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—"ಇಲ್ಲ" ಎಂದು ಆಗಲೇ ಉತ್ತರ ಹೇಳಿದೆ.

ಶ್ರೀ ಜಿ. ವೀರಪ್ಪನವರು.—ನಾನು ಕೇಳುತ್ತಿರು ವುದು, ತಾವು ಅವರಿಗೆ ಪರ್ಮಿಟ್ ಕೊಡಬೇಕಾದರೆ ಇಷ್ಟೇ ಎಕರೆ ಪ್ರದೇಶದಲ್ಲಿ ಇಷ್ಟು ಕತ್ತರಿಸಬೇಕೆಂದು ನಿರ್ದಿಷ್ಟವಾಗಿ ಹೇಳಿಕೊಡುತ್ತೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ನಿರ್ದಿಷ್ಟ ವಾಗಿಯೇ ಇಷ್ಟು ಎಕರೆ ಎಂದು ನಿಗದಿ ಮಾಡಿಕೊಡು ತ್ತೇವೆ.

ಶ್ರೀ ಜಿ. ವೀರಪ್ಪನವರು.—1949-50 ರಲ್ಲಿ ಎಷ್ಟು ಎಕರೆ ಕಾಡನ್ನು ಈ ರೀತಿಯಾಗಿ ಕತ್ತಾಯಿಸಿದೆಯೆಂದು ಹೇಳುತ್ತೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈಗ ಹೇಳು ವುದಕ್ಕಾಗುವುದಿಲ್ಲ. The information is not readily available.

ಶ್ರೀ ಜಿ. ವೀರಪ್ಪನವರು.—ಕಾಡನ್ನು ಹೀಗೆ ಕತ್ತ ರಿಸಿದ ಜಾಗದಲ್ಲಿ ಪುನಃ ಮರಗಳನ್ನು ನೆಡಿಸುವುದಕ್ಕೆ ಸರ್ಕಾರದವರು ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿ ದ್ದಾರೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ತೆಗೆದು ಕೊಂಡಿದ್ದೇವೆ. ಒಂದು planned basis ಮೇಲೆ ಅಫಾರೆಸ್ಟೇಷನ್ ಯಾವರೀತಿ ಮಾಡುತ್ತಿದ್ದೇವೆಂಬು ದನ್ನು ಹಿಂದಿನ ದಿನವೇ ತಿಳಿಸಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಕಾಡಿನಲ್ಲಿರುವ ಮರಗಳಲ್ಲಿ ಯಾವುದು ಸೌದೆಗೆ ಲಾಯಕ್ಕಾಗಿದೆ ಮತ್ತು ಯಾವುದು ಇಲ್ಲ ಎಂದು ತರಗತಿವಾರಾಗಿ ನಿಷ್ಕರ್ಷೆ ಮಾಡಿದ್ದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸೌದೆಗೆ ಇಂಥಾದ್ದೇ ಲಾಯಕ್ಕಾದ್ದೆಂದು ನಿಗದಿ ಮಾಡಿಲ್ಲ. ತೇಗ, ಹೊನ್ನೆ ಮುಂತಾದ ಕಟ್ಟಡ ಕಟ್ಟುವುದಕ್ಕೆ ಬರುವ ಮರಗಳನ್ನು ಸೌದೆಗೆ ಕೊಡುವುದಿಲ್ಲ. ಸಾಮಾ ನ್ಯವಾದುವುಗಳನ್ನು ಕೊಡುತ್ತೇವೆ, ಅಷ್ಟೆ.

ಶ್ರೀ ಎಸ್. ರಂಗರಾಮಯ್ಯನವರು.—ಕೆಲವು ಕಾಡು ಜಾತಿಯ ಮರಗಳೂ ಮರ ಮುಟ್ಟುಗಳಿಗೆ ಲಾಯ ಕ್ಕಾಗಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಗೊತ್ತಿದೆ.

ಶ್ರೀ ಎಸ್. ರಂಗರಾಮಯ್ಯನವರು.—ತೇಗ, ಕರೀ ಮರಗಳನ್ನು ಬಿಟ್ಟು ಮತ್ತಿ, ಹೊನ್ನೆ ಮುಂತಾದ ಕಾಡು ಮರಗಳೂ ಮರ ಮುಟ್ಟುಗಳಿಗೆ ಬರುತ್ತವೆಂಬುದು ಗೊತ್ತಿದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಗೊತ್ತಿದೆ.

ಶ್ರೀ ಎಸ್. ರಂಗರಾಮಯ್ಯನವರು —ಹಾಗಾದರೆ ಅವುಗಳನ್ನು ಕತ್ತಾಯಿಸಕೂಡದೆಂದು ಪರ್ಮಿಟ್ ಕೊಡುವುದರಲ್ಲಿ ನಿರ್ಬಂಧ ಹಾಕಿದ್ದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕೂಪನ್ನು ಕೊಡುವಾಗ ಇಂತಿಂಥ ಮರಗಳನ್ನು ಕಡಿಯಕೂಡ ದೆಂದು ಷರತ್ತುಗಳನ್ನು ಹಾಕಿರುತ್ತೆ. ಅದಕ್ಕೆ ವ್ಯತಿ ರಿಕ್ತವಾಗಿ ಮರಗಳನ್ನು ಕಡಿದರೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತೆ.

ಶ್ರೀ ಎಸ್. ರಂಗರಾಮಯ್ಯನವರು.—ಕೂಪುಗ ಳನ್ನು ಕಡಿಯುವವರು ಹಸಿ ಸೌದೆ ಮರಗಳನ್ನು ಕಡಿಯಬೇಕೇಂದಿದೆಯೋ ಅಥವ ಒಣ ಸೌದೆಯನ್ನು ಕಡಿಯಬೇಕೆಂದಿದೆಯೋ ! ಏಕೆಂದರೆ ಹಸಿ ಸೌದೆ ಮರ ಗಳನ್ನು ಕಡಿಯುವುದರಿಂದ.....

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಎರಡಕ್ಕೂ ಲೈಸೆನ್ಸ್ ಕೊಡುವುದುಂಟು.

ಶ್ರೀ ಎಸ್. ರಂಗರಾಮಯ್ಯನವರು.—ಎರಡನ್ನೂ ಕಡಿಯುತ್ತಾರೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕೂಪು ಗಳನ್ನು ತೆಗೆದುಕೊಳ್ಳುವುದು ಹಸಿಸೌದೆಗೆಂದೇ ತೆಗೆದು ಕೊಳ್ಳುತ್ತಾರೆ. ಒಣ ಸೌದೆ ತೆಗೆದುಕೊಳ್ಳುವವರಿಗೂ ಬೇರೆ ಲೈಸೆನ್ಸ್ ಇದೆ.

ಶ್ರೀ ಎಸ್. ರಂಗರಾಮಯ್ಯನವರು.—ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಎಷ್ಟು ಪ್ರದೇಶ ಕಡಿಸಿದ್ದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ಸಮಾ ಚಾರ ಇಲ್ಲಿಲ್ಲ. ಆಮೇಲೆ ಹೇಳುತ್ತೇನೆ.

ಶ್ರೀ ಎಚ್. ಹುಚ್ಚೆಮಾಸ್ತಿಗೌಡರು (ತುಮಕೂರು ಜಿಲ್ಲೆ).—ಲಂಟಾನಾ ಗಿಡ ಬೆಳೆಯುವುದರಿಂದ ಕಾಡು ಬೆಳೆಯುವುದಕ್ಕೆ ಅಡ್ಡಿಯಾಗಿದೆಯೆಂಬುದು ಗೊತ್ತಿ ದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದು ಅಭಿ ಪ್ರಾಯದ ವಿಷಯ.

ಶ್ರೀ ಎಚ್. ಹುಚ್ಚೆಮಾಸ್ತಿಗೌಡರು.—ಹುಲಯೂರು ದುರ್ಗದ ಕಾಡಿನಲ್ಲಿ ಲಂಟಾನಾ ಬಹಳ ಜಾಸ್ತಿಯಾಗಿದೆ ಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?